**ಸಮಗ್ರ ಶಿಕ್ಷಣ ಕರ್ನಾಟಕ**

ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಟ್ಟಡಗಳ ಪೂರಕ ಕಟ್ಟಡ,
ನೃಪತುಂಗ ರಸ್ತೆ, ಬೆಂಗಳೂರು -೫೬೦ ೦೦೧.

ಸಂಖ್ಯೆ:ಸ.ಶಿ.ಕ/ಸ.ಶಿ/ಬಿ.ಐ.ಇ.ಆರ್.ಟಿ–ನೇ/01//2020–21 ದಿನಾಂಕ: 01/06/2020

## ಸುತ್ತೋಲೆ

ವಿಷಯ : 2020–21ನೇ ಸಾಲಿನಲ್ಲಿ ನೇರಗುತ್ತಿಗೆಯಡಿಯಲ್ಲಿ ಬಿ.ಐ.ಇ.ಆರ್.ಟಿ.ಗಳನ್ನು ಮುಂದುವರೆಸು ಬಗ್ಗೆ.

ಉಲ್ಲೇಖ:
1. ಈ ಕಛೇರಿಯ ಸುತ್ತೋಲೆ ಸಂಖ್ಯೆ: ಸ.ಶಿ.ಕ/ಸ.ಶಿ/ಬಿ.ಐ.ಇ.ಆರ್.ಟಿ–ನೇ/01//2020–21 ದಿನಾಂಕ: 30/05/2020
2. ಈ ಕಛೇರಿಯ ಸುತ್ತೋಲೆ ಸಂಖ್ಯೆ: ಸ.ಶಿ.ಕ/ಸ.ಶಿ/ ಬಿ.ಐ.ಇ.ಆರ್.ಟಿ.ಹುದ್ದೆ/ಭರ್ತಿ/03/19–20 ದಿನಾಂಕ: 05.03.2020.
3. ರಿಟ್ ಅರ್ಜಿ ಸಂಖ್ಯೆ: 28566/2019ರ ದಿನಾಂಕ 26.02.2020ರ ದೈನಂದಿನ ಆದೇಶ.
4. ಅಂಗವಿಕಲ ವ್ಯಕ್ತಿಗಳ ಅಧಿನಿಯಮ ಪ್ರಕರಣ ಸಂಖ್ಯೆ: 20/2018–19/1309 ಮಧ್ಯಂತರ ಆದೇಶ ದಿನಾಂಕ: 02.03.2020.

*********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಸಮನ್ವಯ ಶಿಕ್ಷಣವನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಸರ್ಕಾರಿ ಶಾಲಾ ವಿಶೇಷ ಶಿಕ್ಷಕರಿಂದ ಬಿ.ಐ.ಇ.ಆರ್.ಟಿ ಹುದ್ದೆಗಳನ್ನು ಭರ್ತಿ ಮಾಡಿದ ನಂತರ ಖಾಲಿ ಉಳಿಯುವ ಹುದ್ದೆಗಳಿಗೆ ನೇರಗುತ್ತಿಗೆಯಡಿಯಲ್ಲಿ ಬಿ.ಐ.ಇ.ಆರ್.ಟಿ.ಗಳನ್ನು ವರ್ಷಾಂತ್ಯದಲ್ಲಿ ಅವರ ಕಾರ್ಯಕ್ಷಮತೆಯನ್ನು ಮೌಲ್ಯೀಕರಿಸುವುದರೊಂದಿಗೆ ಜೂನ್ 1ನೇ ತಾರೀಖಿನಂದು ನೇಮಕಾತಿ ಮಾಡಿಕೊಂಡು ಮೇ 31ನೇ ತಾರೀಖಿನಂದು ಬಿಡುಗಡೆ ಮಾಡುವಂತೆ ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ಉಲ್ಲೇಖ(3)ರನ್ವಯ ಆದೇಶಿಸಲಾಗಿದೆ. ಅದರಂತೆ 2019–20ನೇ ಸಾಲಿನಲ್ಲಿ ನೇರಗುತ್ತಿಗೆಯಡಿಯಲ್ಲಿ ತಾತ್ಕಾಲಿಕವಾಗಿ ನೇಮಿಸಿದ್ದ ಬಿ.ಐ.ಇ.ಆರ್.ಟಿ.ಗಳನ್ನು ಉಲ್ಲೇಖ(1)ರನ್ವಯ ಕರ್ತವ್ಯದಿಂದ ಬಿಡುಗಡೆಗೊಳಿಸಲಾಗಿರುತ್ತದೆ.

2020–21ನೇ ಸಾಲಿನಲ್ಲಿ ಸಮನ್ವಯ ಶಿಕ್ಷಣವನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಖಾಲಿಯಿರುವ ಬಿ.ಐ.ಇ.ಆರ್.ಟಿ ಹುದ್ದೆಗಳಿಗೆ ನೇರಗುತ್ತಿಗೆಯಡಿಯಲ್ಲಿ ಕೆಳಕಂಡ ಸೂಚನೆಗಳನ್ನು ಅನುಸರಿಸಿ ನೇಮಕಾತಿ ಮಾಡಿಕೊಳ್ಳುವಂತೆ ತಿಳಿಸಿದೆ.

1. ಉಲ್ಲೇಖ(1)ರನ್ವಯ 2019–20ನೇ ಸಾಲಿನಲ್ಲಿ ಕರ್ತವ್ಯ ನಿರ್ವಹಿಸಿ ಬಿಡುಗಡೆಗೊಂಡ ನೇರಗುತ್ತಿಯ ಬಿ.ಐ.ಇ.ಆರ್.ಟಿ.ಗಳಿಂದ ಒಪ್ಪಿಗೆ ಪತ್ರವನ್ನು ಪಡೆದು ತಕ್ಷಣವೇ ನೇಮಕಾತಿ ಮಾಡಿಕೊಂಡು ಕರ್ತವ್ಯಕ್ಕೆ ಹಾಜರುಪಡಿಸಿಕೊಳ್ಳುವುದು.

2. ನೇಮಕಾತಿ ಆದೇಶದಲ್ಲಿ ಕೆಳಕಂಡ ಷರತ್ತುಗಳನ್ನು ಅಳವಡಿಸುವುದು.

    - ನೇಮಕಾತಿಯು ದಿನಾಂಕ 31.05.2021 ರವರೆಗೆ ತಾತ್ಕಾಲಿಕವಾದದ್ದು.
    - ನೇರಗುತ್ತಿಯಡಿಯಲ್ಲಿ ನೇಮಕಾತಿಯಾದ ಬಿ.ಐ.ಇ.ಆರ್.ಟಿ.ಗಳ ಹುದ್ದೆಗೆ ಸರ್ಕಾರಿ ಶಾಲಾ ವಿಶೇಷ ಶಿಕ್ಷಕರಿಂದ ಹುದ್ದೆಗಳು ಭರ್ತಿಯಾದಲ್ಲಿ, ನೇರಗುತ್ತಿಗೆಯ ಬಿ.ಐ.ಇ.ಆರ್.ಟಿ.ಗಳನ್ನು ಕೂಡಲೇ ಕರ್ತವ್ಯದಿಂದ ಬಿಡುಗಡೆಗೊಳಿಸಲಾಗುವುದು.

3. ಒಂದು ವೇಳೆ ಯಾವುದೇ ನೇರಗುತ್ತಿಗೆ ಬಿ.ಐ.ಇ.ಆರ್.ಟಿ.ಗಳು 2020–21ನೇ ಸಾಲಿನ ನೇಮಕಾತಿಗೆ ಇಚ್ಛಿಸದಿದ್ದಲ್ಲಿ, ಅವರಿಂದ ಲಿಖಿತ ಹೇಳಿಕೆಯನ್ನು ಪಡೆದುಕೊಂಡು ಜಿಲ್ಲಾ ಹಂತದಲ್ಲಿ ಹುದ್ದೆಗಳನ್ನು ಅರ್ಹ ವಿದ್ಯಾರ್ಹತೆಯುಳ್ಳ ಸರ್ಕಾರಿ ಶಾಲಾ ಶಿಕ್ಷಕರಿಂದ ಅಥವಾ ನೇರಗುತ್ತಿಯಡಿಯಲ್ಲಿ ಭರ್ತಿ ಮಾಡಿಕೊಳ್ಳಲು ಕ್ರಮವಹಿಸುವುದು.
4. 2019–20ನೇ ಸಾಲಿನಲ್ಲಿ ಕರ್ತವ್ಯ ನಿರ್ವಹಿಸಿ ಬಿಡುಗಡೆ ಹೊಂದಿರುವ ನೇರಗುತ್ತಿಗೆ ಬಿ.ಐ.ಇ.ಆರ್.ಟಿ.ಗಳು ದಿನಾಂಕ 10.06.2020 ರಂದು ಸಂಜೆ 5.30ರೊಳಗಾಗಿ ಒಪ್ಪಿಗೆ ಪತ್ರ ನೀಡದಿದ್ದಲ್ಲಿ, ಅಂತಹ ಹುದ್ದೆಗಳನ್ನು ಅರ್ಹ ಹಾಗೂ ಆಸಕ್ತ ಅಭ್ಯರ್ಥಿಗಳಿಂದ ಭರ್ತಿಗೊಳಿಸುವುದು.
5. 2020–21ನೇ ಸಾಲಿನಲ್ಲಿ ನೇರಗುತ್ತಿಗೆಯಡಿಯಲ್ಲಿ ನೇಮಕಗೊಂಡ ಬಿ.ಐ.ಇ.ಆರ್.ಟಿ.ಗಳ ಮಾಹಿತಿಯನ್ನು **ದಿನಾಂಕ 12.06.2020ರೊಳಗೆ** ಈ ಕಛೇರಿಗೆ ಆಂಗ್ಲಭಾಷೆಯಲ್ಲಿ ಕೆಳಕಂಡ ನಮೂನೆಯಲ್ಲಿ googlespreadsheetನಲ್ಲಿ ಸಿದ್ಧಪಡಿಸಿ ಸಲ್ಲಿಸುವಂತೆ ತಿಳಿಸಿದೆ.

| SI. NO. | DIVISION | DISTRICT | TALUK | NAME OF THE BIERT | PHONE NUMBER | QUALIFICATION | SPECIALISATION AREA | PRIMARY/ SECONDARY | DATE OF NEW APPOINTMENT | WHETHER WORKED AS BIERT DURING 2019-20 - IF YES | |
|---|---|---|---|---|---|---|---|---|---|---|---|
| | | | | | | | | | | FROM | TO |
| | | | | | | | | | | | |
| | | | | | | | | | | | |
| | | | | | | | | | | | |

6. 2019–20ನೇ ಸಾಲಿನಲ್ಲಿ ಕೋವಿಡ್–19ರ ಪ್ರಯುಕ್ತ ಬಿ.ಐ.ಇ.ಆರ್.ಟಿಗಳ ಕಾರ್ಯಕ್ಷಮತೆಯ ಮೌಲ್ಯಮಾಪನವನ್ನು ಮಾಡಲು ಸಾಧ್ಯವಾಗಿರುವುದಿಲ್ಲ. ಮುಂದಿನ ದಿನಗಳಲ್ಲಿ ಈ ಕಛೇರಿಯ ವತಿಯಿಂದ ನಿರ್ಧರಿಸುವ ರೀತಿಯಲ್ಲಿ ಬಿ.ಐ.ಇ.ಆರ್.ಟಿಗಳ ಕಾರ್ಯಕ್ಷಮತೆಯ ಮೌಲ್ಯಮಾಪನವನ್ನು ಮಾಡುವ ಮೂಲಕ ಸೇವೆಯನ್ನು ಮುಂದುವರೆಸುವ ಬಗ್ಗೆ ನಿರ್ಧರಿಸಲಾಗುವುದು.

**ರಾಜ್ಯ ಯೋಜನಾ ನಿರ್ದೇಶಕರು**
**ಸಮಗ್ರ ಶಿಕ್ಷಣ–ಕರ್ನಾಟಕ**
**ಬೆಂಗಳೂರು**

ಗೆ,
1. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಜಿಲ್ಲಾ ಯೋಜನಾ ಉಪಸಮನ್ವಯಾಧಿಕಾರಿ, ಸಮಗ್ರ ಶಿಕ್ಷಣ ರವರಿಗೆ ಸೂಕ್ತ ಕ್ರಮಕ್ಕಾಗಿ.

**ಪ್ರತಿಯನ್ನು ಗೌರವ ಪೂರಕವಾಗಿ ಮಾಹಿತಿಯನ್ನು ಸಲ್ಲಿಸಿದೆ.**
1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ ಮತ್ತು ಬೆಳಗಾವಿ ವಿಭಾಗ ವಿಭಾಗ, ಬೆಂಗಳೂರು.
4. ಕಛೇರಿ ಪ್ರತಿ